ಸಾಕ್ಷಿಯನ್ನು ದಿನಾಂಕಃ **13.02.2026.** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ ಆರ್.ಎನ್.ಹೆಚ್ 1 ರಿಂದ 3 ನೇ ಪ್ರತಿವಾದಿಯರ ಪರ ವಕೀಲರಿಂದಃ**

ದಾವಾಸ್ತಿಯೂ ಎರಡು ಭಾಗದ ಮನೆಗಳು ಎಂದರೆ ಸರಿ. ನಾವು 2018 ರ ಪೂರ್ವದಲ್ಲಿ ಮಸ್ಕತ್ ನಲ್ಲಿದ್ದಾಗ ಸದರಿ ಮನೆಗಳನ್ನು ಬಾಡಿಗೆಗೆ ಕೊಡಲಾಗಿತ್ತು ಎಂದರೆ ಹೌದು. ದಾವಾಸ್ತಿಯ ಒಂದು ಭಾಗದ ಮನೆಯಲ್ಲಿ ಮಹಾಂತೇಶ ಹಡಪದ ಮತ್ತು ಇನ್ನೊಂದು ಭಾಗದ ಮನೆಯಲ್ಲಿ ದಸ್ತಗಿರಸಾಬ ಮೌಲಾಸಾಬ ಬಂಡಿ ಎನ್ನುವವರು ಬಾಡಿಗೆಗೆ ಇದ್ದರು ಎಂದರೆ ಹೌದು. ಸದರಿಯವರು ಎಷ್ಟು ವರ್ಷಗಳವರೆಗೆ ಬಾಡಿಗೆಗೆ ಇದ್ದರು ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಬಂದಾಗ, ಅವರು ಅಲ್ಲಿ ಇದ್ದರು ಎಂದು ನುಡಿಯುತ್ತಾರೆ. 2018 ರಲ್ಲಿ ನಾವು ಮುಂಡಗೋಡಿಗೆ ಮರಳಿದ ನಂತರ, ಬಂಕಾಪೂರ ರಸ್ತೆಯಲ್ಲಿರುವ ಸಿಂಡಿಕೇಟ್ ಬ್ಯಾಂಕಿನ ಎದುರುಗಡೆ ಇರುವ ದುರ್ಗಾ ಅಪಾರ್ಟಮೆಂಟ್ಸನಲ್ಲಿ ವಾಸವಾಗಿದ್ದೆವು. ನಾವು ಅಲ್ಲಿ ಸುಮಾರು ಒಂದು ವರ್ಷಕ್ಕಿಂತಲೂ ಹೆಚ್ಚಿಗೆ ವಾಸವಾಗಿದ್ದೆವು, ನಿಖರವಾಗಿ ಹೇಳಲು ಬರುವುದಿಲ್ಲ. ಸಾಕ್ಷಿ ಮುಂದುವರೆದು, ಸಾಮಾನುಗಳು ಮಾತ್ರ ಅಲ್ಲಿ ಇದ್ದವು ಎಂದು ನುಡಿಯುತ್ತಾರೆ. ಈಗ ನಾವು ವಾಸವಾಗಿರುವ ದಾವಾಸ್ತಿ ಮನೆ ರಿಪೇರಿ ಆಗುವವರೆಗೆ ನಾವು ದುರ್ಗಾ ಅಪಾರ್ಟಮೆಂಟ್ಸನಲ್ಲಿ ವಾಸವಾಗಿದ್ದೆವು, ಅಲ್ಲಿ ದೊಡ್ಡ ದೊಡ್ಡ ವಸ್ತುಗಳನ್ನು ಮಾತ್ರ ಇಟ್ಟಿದ್ದೇವು. 1 ನೇ ಪ್ರತಿವಾದಿ ನಿವೃತ್ತ ಸರ್ಕಾರಿ ನೌಕರಸ್ಥಳು ಎಂದರೆ ಸರಿ. ಸರ್ಕಾರಿ ನೌಕರರು ನಿವೃತ್ತಿಗೆ ಸಮೀಪಿಸಿದಾಗ, ಅವರಿಗೆ ಸಾಕಷ್ಟು ಸಂಬಳ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ 2020 ರಲ್ಲಿ ನಿವೃತ್ತಿಯಾಗಿರುತ್ತಾರೆ ಎಂದರೆ ಇರಬಹುದು.

ನಾನು ನನ್ನ ವಾದಪತ್ರದ 3 ನೇ ಪುಟದ 5 ನೇ ಸಾಲಿನಲ್ಲಿ " ಕೃಷಿ ಜಮೀನನ್ನು ತಾನೇ -------- ಇಂದಿಗೂ ಮರಳಿ ಕೊಟ್ಟಿರುವುದಿಲ್ಲ" ಎಂದು ಬರೆಸಿದ್ದು, ಅದು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಸದರಿ ಸಮಯಕ್ಕೆ ಸಾಕಷ್ಟು ಸಂಬಳ ಇದ್ದಿದ್ದರಿಂದ, ನಾನು ನನ್ನ ವಾದ ಪತ್ರದಲ್ಲಿ ಹೇಳಿದಂತೆ, ಅವರಿಗೆ ಉತ್ಪನ್ನದಿಂದ ವಂಚಿತರಾಗುವ ಪ್ರಮಯ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು, ಅವರಿಗೆ ಮನೆ ಖಾಲಿ ಮಾಡಿಸುವುದಿತ್ತು ಎಂದು ನುಡಿಯುತ್ತಾರೆ. ನಾನು ಹೇಳುವಂತಹ ದಾವಾ ಕಾರಣ , ಉದ್ಭವಿಸಿರುತ್ತದೆ ಎಂದು ಹೇಳುವ ಕಾಲಕ್ಕೆ ನಮ್ಮ ಸಾಮಾನುಗಳು ದುರ್ಗಾ ಅಪಾರ್ಟಮೆಂಟ್ಸನಲ್ಲಿ ಇದ್ದವು ಎಂದರೆ ಸುಳ್ಳು. ಈ ದಾವೆ ದಾಖಲು ಮಾಡುವ ಕಾಲಕ್ಕೆ ಈ ಮೇಲೆ ಹೇಳಿದ ಬಾಡಿಗೆದಾರರಾದ ಮಹಾಂತೇಶ ಮತ್ತು ದಸ್ತಗಿರಸಾಬ ರವರಿಗೆ ಸಂಬಂಧಿಸಿದ ಸಾಮಾನುಗಳು ದಾವಾಸ್ತಿಯ ಮನೆಗಳಲ್ಲಿ ಇದ್ದವು ಎಂದರೆ, ಅವರೇ ಸದರಿ ಮನೆಗಳಲ್ಲಿದ್ದರು ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ವಿಷಯಗಳನ್ನು ಕಾಣಿಸದೇ ಅಮಾಯಕರಾದ ಪ್ರತಿವಾದಿಯರ ವಿರುದ್ಧ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆದ ಕಾರಣ, ನಾನು ಈ ದಾವೆಯಲ್ಲಿ ಕೇಳಿದ ಪರಿಹಾರವನ್ನು ಕೇಳಲು ಅರ್ಹರಳ್ಳ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ .**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)**

ಓ ಹೆ ಕೇ ಸರಿ ಇದೆ.

**Sd/-**

**ಸಿವಿಲ್ ಜಡ್ಜ, ಮುಂಡಗೋಡ.**